# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1203(1361) |
| ಸದಸ್ಯರ ಹೆಸರು | ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ |
| ಉತ್ತರಿಸಬೇಕಾದ ದಿನಾಂಕ | 16.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಅರಣ್ಯ ಅಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ದಾಳಿಯಿಂದ ಮೃತಪಟ್ಟ ನಾಗರೀಕರ ಸಂಖ್ಯೆ ಎಷ್ಟು ಇವರಲ್ಲಿ ಎಷ್ಟು ಕುಟುಂಬಗಳಿಗೆ ಸರ್ಕಾರಿ ಆದೇಶದಂತೆ ರೂ 15 ಲಕ್ಷ ಪರಿಹಾರವನ್ನು ಸಂಪೂರ್ಣವಾಗಿ ವಿತರಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳು ಬಾಕಿ ಇದೆ; (ಜಿಲ್ಲಾವಾರು ಮತ್ತು ವರ್ಷವಾರು ಪಟ್ಟಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಅರಣ್ಯದಂಚಿನ ಗ್ರಾಮಗಳಲ್ಲಿ ಕ್ರಮವಾಗಿ 36 ಹಾಗೂ 35 ನಾಗರೀಕರು ಮೃತಪಟ್ಟಿದ್ದು, ವನ್ಯಜೀವಿಗಳಿಂದ ಉಂಟಾದ ನಾಗರೀಕರ ಮಾನವ ಪ್ರಾಣಹಾನಿ ಪ್ರಕರಣಗಳ ವಿವರ ಹಾಗೂ **ಚಾಲ್ತಿಯಲ್ಲಿದ್ದ/ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶಗಳನುಸಾರ** ಪಾವತಿಸಲಾದ ದಯಾತ್ಮಕ ಧನದ ವಿವರಗಳನ್ನು **ಅನುಬಂಧ-01ರಲ್ಲಿ** ಒದಗಿಸಲಾಗಿದೆ. |
| ಆ) | ಮೈಸೂರು ಜಿಲ್ಲೆಯ ಟಿ ನರಸೀಪುರ ಮತ್ತು ಹೆಚ್.ಡಿ ಕೋಟೆ ಭಾಗಗಳಲ್ಲಿ ಚಿರತೆ ದಾಳಿಗಳು ಹೆಚ್ಚುತ್ತಿರುವುದು ಹಾಗೂ ಚಾಮರಾಜನಗರ ಬಂಡೀಪುರ ಅಂಚಿನ ಗ್ರಾಮಗಳಲ್ಲಿ ಹುಲಿ ದಾಳಿಯಿಂದ ಜಾನುವಾರು ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಈ ಭಾಗಗಳಲ್ಲಿ ಎಷ್ಟು ವಿಶೇಷ ಚಿರತೆ ಕಾರ್ಯಪಡೆ (Leopard task force) ತಂಡಗಳನ್ನು ನಿಯೋಜಿಸಲಾಗಿದೆ | ಬಂದಿದೆ.<br><br>ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ 311 ಎಫ್‌ಇಜಿ 2022(ಇ), ಬೆಂಗಳೂರು ದಿನಾಂಕ: 31.01.2023 ಆದೇಶದಲ್ಲಿ ಮೈಸೂರು ವೃತ್ತದ ಮೈಸೂರು /ನಂಜನಗೂಡು/ ಹೆಚ್.ಡಿ.ಕೋಟೆ /ಸರಗೂರು /ಟಿ.ನರಸೀಪುರ /ಮಂಡ್ಯ/ಪಾಂಡವಪುರ /ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಒಳಗೊಂಡಂತೆ ಚಿರತೆ ಕಾರ್ಯಪಡೆ (Leopard Task Force)ಯನ್ನು ರಚಿಸಲಾಗಿರುತ್ತದೆ.<br><br>ಸದರಿ ಚಿರತೆ ಕಾರ್ಯಪಡೆ (LTF) ತಂಡವು 24X7 ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ದೂರುಗಳು ಬಂದಲ್ಲಿ ಕೂಡಲೇ ಸ್ಥಳಕ್ಕೆ ಧಾವಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಅಲ್ಲದೇ, ಸಂಘರ್ಷಕ್ಕೊಳಗಾಗುವ ಚಿರತೆ ಹಾಗೂ ಹುಲಿಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಸೆರೆಹಿಡಿದು ಸೂಕ್ತ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಬಂಡೀಪುರ ಮತ್ತು ನಾಗರಹೊಳೆ ಅಭಯಾರಣ್ಯಗಳ ಅಂಚಿನಲ್ಲಿರುವ ರೈತರ ಜಮೀನುಗಳಿಗೆ ಕಾಡಾನೆಗಳು ನುಗ್ಗದಂತೆ ತಡೆಯಲು ರೈಲ್ವೆ | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅರಣ್ಯದಂಚಿನಲ್ಲಿರುವ ರೈತರ ಜಮೀನುಗಳಿಗೆ ಕಾಡಾನೆಗಳು ಬರದಂತೆ **88.41 ಕಿ.ಮೀ**. ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ **105.33 ಕಿ.ಮೀ**. ಉದ್ದದ ರೈಲ್ವೆ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | ಬ್ಯಾರಿಕೇಡ್ (Railway Barricade) ನಿರ್ಮಿಸಲಾಗಿದೆಯೇ; ಕಾಮಗಾರಿ ಎಷ್ಟು ಕಿಲೋಮೀಟರ್ ಪೂರ್ಣಗೊಂಡಿದೆ ಮತ್ತು ಅನುದಾನದ ಕೊರತೆಯಿಂದ ಅರ್ಧಕ್ಕೆ ನಿಂತಿರುವ ಕಾಮಗಾರಿಗಳ ವಿವರಗಳನ್ನು ನೀಡುವುದು; | ಬ್ಯಾರಿಕೇಡ್ (Railway barricade) ಅನ್ನು ನಿರ್ಮಿಸಲಾಗಿರುತ್ತದೆ. ಪ್ರಸ್ತುತ ಪ್ರಸ್ತಾಪಿತ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಹಾಗೂ ಅನುದಾನದ ಕೊರತೆಯಿರುವುದಿಲ್ಲ. |
| ಈ) | ವನ್ಯಜೀವಿ ದಾಳಿಯಿಂದ ಮೃತಪಟ್ಟವರ ಕುಟುಂಬದ ಒಬ್ಬ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಕೆಲಸ ನೀಡುವ ಅಥವಾ ತಿಂಗಳಿಗೆ ನಿಗದಿತ ಮಾಶಾಸನ ನೀಡುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; | ಸರ್ಕಾರಿ ಆದೇಶ ಸಂಖ್ಯೆ: ಅಪಜೀ 114 ಎಫ್ ಡಬ್ಲ್ಯು ಎಲ್ 2022, ಬೆಂಗಳೂರು ದಿನಾಂಕ: 29.04.2025 ರಲ್ಲಿ ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಕ್ಕೆ **ರೂ.20.00 ಲಕ್ಷಗಳು** ದಯಾತ್ಮಕ ಧನವನ್ನು ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ನೀಡುವುದರ ಜೊತೆಗೆ **ಮಾಹೆಯಾನ ರೂ.4,000 ರಂತೆ 05 ವರ್ಷಗಳ ಅವಧಿಗೆ ಮಾಸಾಶನ** ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರಿ ಆದೇಶದನ್ವಯ ವನ್ಯಪ್ರಾಣಿಗಳ ದಾಳಿಯಿಂದ ಮೃತಪಟ್ಟ ಕುಟುಂಬದ ವಾರಸುದಾರರಿಗೆ ಸರ್ಕಾರಿ ನೌಕರಿ ನೀಡಲು ಅವಕಾಶವಿರುವುದಿಲ್ಲ. |
| ಉ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಂಘರ್ಷ ಪೀಡಿತ ಗ್ರಾಮಗಳ ಜನರಿಗೆ ರಾತ್ರಿ ವೇಳೆ ಅರಣ್ಯ ಇಲಾಖೆಯಿಂದ 'ಹೈ-ಇಂಟೆನ್ಸಿಟಿ' ಬೀದಿ ದೀಪಗಳು ಮತ್ತು ಸೋಲಾರ್ ದೀಪಗಳನ್ನು ಅಳವಡಿಸಲು ಹಾಗೂ ಡ್ರೋನ್ ಮೂಲಕ ನಿರಂತರ ನಿಗಾ ವಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ವನ್ಯಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಸಂಘರ್ಷ ಬಾಧಿತ ಗ್ರಾಮಗಳಿಗೆ ಸೋಲಾರ್ ದೀಪಗಳನ್ನು ಅಳವಡಿಸಲಾಗಿರುತ್ತದೆ<br>• ರಾತ್ರಿ ಗಸ್ತು ತಿರುಗುವ ಸಿಬ್ಬಂದಿಗಳಿಗೆ ಕಂಟ್ರೋಲ್ ರೂಮ್ ಮೂಲಕ ಸಂದೇಶಗಳನ್ನು ರವಾನಿಸಿ, ಕೂಡಲೇ ಸ್ಪಂದಿಸಲಾಗುತ್ತಿದೆ.<br>ನಾರ್ಮಲ್ ಡ್ರೋನ್ ಮತ್ತು ಥರ್ಮಲ್ ಡ್ರೋನ್ ಮೂಲಕ ವನ್ಯಜೀವಿ ಸಂಘರ್ಷ ಪೀಡಿತ ಗ್ರಾಮಗಳಲ್ಲಿ ವನ್ಯಜೀವಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 80 ಎಫ್‌ಡಬ್ಲ್ಯೂಎಲ್ 2026**

**(ಈಶ್ವರ ಬಿ. ಖಂಡ್ರೆ)**
**ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

## ಅನುಬಂಧ-01

### ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಮೃತಪಟ್ಟ ನಾಗರೀಕರ ಸಂಖ್ಯೆ ಹಾಗೂ ವಿತರಿಸಲಾದ ಪರಿಹಾರಧನದ ವಿವರ

(ಮೊತ್ತ ರೂ ಲಕ್ಷಗಳಲ್ಲಿ)

### ಮೈಸೂರು ಜಿಲ್ಲೆ

| 2022-23 | | | | 2023-24 | | 2024-25 | | 2025-26 | |
|---|---|---|---|---|---|---|---|---|---|
| ಸರ್ಕಾರದ ಆದೇಶ ಸಂಖ್ಯೆ:ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿ:07/01/2020ರಂತೆ **ರೂ.7.50 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ:15-12-2022ರಂತೆ **ರೂ. 15 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ:15-12-2022ರಂತೆ **ರೂ.15 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ:15-12-2022ರಂತೆ **ರೂ.15 ಲಕ್ಷ** ಪರಿಹಾರಧನ ಪಾವತಿಸ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ: 29.04.2025 ರಂತೆ **ರೂ.20 ಲಕ್ಷ** ಪರಿಹಾರಧನ ಪಾವತಿ | |
| **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** |
| 7 | 52.5 | 5 | 75 | 11 | 165 | 5 | 75 | 8 | 140 |

= 36

*2025-26 ನೇ ಸಾಲಿನಲ್ಲಿ ಒಂದು ಪ್ರಕರಣವು ಅರಣ್ಯದೊಳಗೆ ಸಂಭವಿಸಿರುವುದರಿಂದ ಪರಿಹಾರಧನ ಪಾವತಿಸಿರುವುದಿಲ್ಲ.

### ಚಾಮರಾಜನಗರ ಜಿಲ್ಲೆ

| 2022-23 | | | | 2023-24 | | 2024-25 | | 2025-26 | |
|---|---|---|---|---|---|---|---|---|---|
| ಸರ್ಕಾರದ ಆದೇಶ ಸಂಖ್ಯೆ:ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿ:07/01/2020ರಂತೆ **ರೂ.7.50 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ:15-12-2022ರಂತೆ **ರೂ.15 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ:15-12-2022ರಂತೆ **ರೂ.15 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ:15-12-2022ರಂತೆ **ರೂ.15 ಲಕ್ಷ** ಪರಿಹಾರಧನ ಪಾವತಿ | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು, ದಿನಾಂಕ: 29.04.2025 ರಂತೆ **ರೂ.20 ಲಕ್ಷ** ಪರಿಹಾರಧನ ಪಾವತಿ. | |
| **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** | **ಪ್ರಕರಣ** | **ಮೊತ್ತ** |
| 4 | 30 | 4 | 47 | 12 | 165 | 6 | 75 | 9 | 130 |

= 35

*2022-23ನೇ ಸಾಲಿನಲ್ಲಿ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಾರಸುದಾರರ ಕಾನೂನಾತ್ಮಕ ಅಡಚಣೆ ಇರುವುದರಿಂದ ರೂ.02 ಲಕ್ಷ ಮಾತ್ರ ಪಾವತಿಸಲಾಗಿರುತ್ತದೆ.
*2023-24ನೇ ಸಾಲಿನಲ್ಲಿ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯದೊಳಗೆ ಸಂಭವಿಸಿರುವುದರಿಂದ ಪರಿಹಾರಧನ ಪಾವತಿಸಿರುವುದಿಲ್ಲ.
*2024-25ನೇ ಸಾಲಿನಲ್ಲಿ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯದೊಳಗೆ ಸಂಭವಿಸಿರುವುದರಿಂದ ಪರಿಹಾರಧನ ಪಾವತಿಸಿರುವುದಿಲ್ಲ.
*2025-26ನೇ ಸಾಲಿನಲ್ಲಿ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯದೊಳಗೆ ಸಂಭವಿಸಿರುವುದರಿಂದ ಪರಿಹಾರಧನ ಪಾವತಿಸಿರುವುದಿಲ್ಲಮತ್ತು 02 ಪ್ರಕರಣಗಳಿಗೆ ಸಂಬಂಧಿಸಿದಂತೆ ತಲಾ 05 ಲಕ್ಷ ಪರಿಹಾರ ಪಾವತಿಸಲಾಗಿದ್ದು, ನಿಗಧಿತ ದಾಖಲಾತಿ ಸಲ್ಲಿಸಿದ ನಂತರ ಉಳಿದ ಪರಿಹಾರ ಮೊತ್ತ ಪಾವತಿಸಲಾಗುವುದು

13/3/26.

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು**
**ಕರ್ನಾಟಕ, ಬೆಂಗಳೂರು.**